ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12.03.2025.
**<u>ಪಾಟೀ ಸವಾಲುಃ</u>** <u>ವಾದಿ ಪರ ಶ್ರೀ ಪಿ.ಎನ್.ಎಸ್. ವಕೀಲರಿಂದಃ</u>

ವಾದಿ ಶಿವಲಿಂಗಪ್ಪ ನನಗೆ ಅಣ್ಣ ಆಗಬೇಕು. ನನ್ನ ತಂದೆ ಹೆಸರು ಶಿವಣ್ಣ, ನನ್ನ ತಾಯಿ ಚೋಳಮ್ಮ ಇರುತ್ತದೆ. ನನ್ನ ತಂದೆ ಶಿವಣ್ಣ ರವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ನಾನು ಒಬ್ಬಳೆ ಹೆಣ್ಣು ಮಗಳು ಇರುತ್ತೇನೆ. ಅವರೇಂದರೆ, ದತ್ತಾತ್ರಯ, ಶಿವಲಿಂಗಪ್ಪ, ಚಂದ್ರಕಾಂತ, ನಾಗಪ್ಪ ಹಾಗೂ ನಾನು ಇರುತ್ತೇವೆ. ನನ್ನ ಗಂಡನ ಹೆಸರು ಸೈದಪ್ಪ ಇರುತ್ತದೆ. ಅಂದರೆ 8ನೇ ಪ್ರತಿವಾದಿ ನನ್ನ ಗಂಡ ಇರುತ್ತಾನೆ. ನನ್ನ ತಂದೆ ಶಿವಣ್ಣ ಮತ್ತು ನನ್ನ ಗಂಡ ಸೈದಪ್ಪನ ಕುಟುಂಬ ಅಣ್ಣ-ತಮ್ಮಕಿ ಇರುವುದಿಲ್ಲ, ಆದರೆ ಬೀಗರು ಆಗುತ್ತಾರೆ. ದಾವಾ ಸ್ವತ್ತುಗಳು ಎಲ್ಲವು ನನ್ನ ತಂದೆ ಶಿವಣ್ಣ ರವರ ಮತ್ತು ಅವರ ಅಣ್ಣ-ತಮ್ಮಂದಿರಿಂದ ಬಂದಿರುವ ಸ್ವತ್ತುಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಶಿವಣ್ಣ ಇರುವವರೆಗೂ ನಾನು ಮತ್ತು ನನ್ನ ಸಹೋದರರು ಬೇರೆ ಆಗಿಲ್ಲ ಇನ್ನು ಕೂಡಿಯೇ ಇರುತ್ತೇವೆ.

ನನ್ನ ತಂದೆ ಬಿಟ್ಟು ಹೋಗಿರುವ ಸ್ವತ್ತುಗಳಲ್ಲಿ ನನಗೂ ಕೂಡಾ ಒಂದು ಪಾಲು ಇರುತ್ತದೆ. ಸರ್ವೆ ನಂ.337ರ ಐಟಂ ನಂ.11ರ ಸ್ವತ್ತುನ್ನು 1ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಯಾಗಿದೆ ಎಂದರೆ ಸರಿ. ಸದರಿ ಐಟಂ ನಂ.11ರ ಸ್ವತ್ತುನ್ನು ಎಲ್ಲರೂ ಕೂಡಿಯೇ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ನನ್ನ ಗಂಡ ಸೈದಪ್ಪನ ಹೆಸರಿನಲ್ಲಿ ಐಟಂ ನಂ.11ರ ಸ್ವತ್ತುನ್ನು ನನ್ನ ತಂದೆ ಅವರಿಗೆ ಮಾಡಿಕೊಟ್ಟಿರುತ್ತಾರೆ, ಆದರೆ ಏನು ದಾಖಲೆ ಮಾಡಿಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ವಾದಿಗೆ ಐಟಂ ನಂ.11ರ ಸ್ವತ್ತಲ್ಲಿ ಹಿಸ್ಸಾ ಕೊಡಬಾರದು ಎಂಬ ಉದ್ದೇಶದಿಂದ, 1ನೇ ಪ್ರತಿವಾದಿ ನನ್ನ ಗಂಡನ ಹೆಸರಿನಲ್ಲಿ ಸದರಿ ಸ್ವತ್ತುನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.11ರ ಸ್ವತ್ತುನ್ನು ವಾದಿ, 1 ರಿಂದ 6ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಐಟಂ

ನಂ.11ರ ಸ್ವತ್ತುಲ್ಲಿ ನನಗೂ ಕೂಡಾ ಪಾಲು ಇರುತ್ತದೆ ಎಂದರೆ ಸರಿ.

ವಾದಿ ಕಲಬುರಗಿಯಲ್ಲಿಯೇ ಶಾಲೆ ಕಲಿತು, ಅಲ್ಲೆಯೇ ನೌಕರಿ ಪಡೆದುಕೊಂಡು, ಅಲ್ಲಿಯೇ ಇರುತ್ತಾರೆ ಎಂದರೆ ಸರಿ. ವಾದಿ ಶಿವಲಿಂಗನ ಹೆಂಡತಿ ಕೂಡಾ ಸರ್ಕಾರಿ ನೌಕರಿಯಲ್ಲಿ ಇರುತ್ತಾರೆ ಎಂದರೆ ಸರಿ. ವಾದಿ ತಾನು ಬ್ಯಾಂಕಿನಿಂದ ಸಾಲ ಪಡೆದುಕೊಂಡು ಕಲಬುರಗಿಯಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದರೆ, ಸಾಕ್ಷಿ ನಾವು ಕೂಡಾ ಹಣ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಕೂಡಾ ಹಣ ಕೊಟ್ಟಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನಾವು ಇಟ್ಟಿರುವುದಿಲ್ಲ. ಕಲಬುರಗಿಯಲ್ಲಿ ವಾದಿ ತಾನು ಸ್ವಂತ ಸಾಲ ತೆಗೆದು ಮನೆ ಕಟ್ಟಿಸಿ, ಸದರಿ ಸಾಲವನ್ನು ತಾನೆ ಮುಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನಾಗಪ್ಪ ಅಂದರೆ 6ನೇ ಪ್ರತಿವಾದಿ ಸಾಯುವವರೆಗೂ ಆತ ತಂದೆ ಶಿವಣ್ಣ ಹೆಸರಿನಲ್ಲಿ ಕರೆಯುತ್ತಿದ್ದರು ಎಂದರೆ ಸರಿ. ಸರ್ವೆ ನಂ.68ರಲ್ಲಿ ಕೂಡಾ ನನಗೆ ಹಿಸ್ಸಾ ಇದೆ ಎಂದರೆ ಸರಿ. 3ನೇ ಪ್ರತಿವಾದಿ, 1ನೇ ಪ್ರತಿವಾದಿ ಮಗಳು ಆಗಬೇಕು. ಸರ್ವೆ ನಂ.68 ಇದು 17 ಎಕರೆ 24 ಗುಂಟೆ ಜಮೀನು ಇದು ಕೂಡಾ ಜಂಟಿ ಕುಟುಂಬದ ಆಸ್ತಿ ಇದ್ದು, ಅದರಲ್ಲಿ ಎಲ್ಲರೂ ಕೂಡಾ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**